**Thursday 18th December 2024, Page No. 04**

# In the post graduate graduation ceremony organized at RV Engineering College Meritorious students were honored with gold medals.




ಆರ್.ವಿ.ಇಂಜನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು. ರಾಜ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಟಿ.ಆರ್.ಪರಶುರಾಮನ್, ಡಾ.ಎಂ.ಪಿ.ಶ್ಯಾಮ್, ಸಹಾಯಕ ಕಾರ್ಯದರ್ಶಿ ನಿಖಿಲ್ ಮೂರ್ತಿ, ಪ್ರಾಂಶುಪಾಲ ಡಾ.ಸುಬ್ರಮಣ್ಯ, ಡಾ.ಗೀತಾ ಇದ್ದರು.

BENGALURU Edition
Dec 18, 2024 Page No. 04
Powered by: erelego.com

# ಛಲದಿಂದ ಸಾಧನೆ ಸಾಧ್ಯ: ಪರಶುರಾಮನ್

**ಬೆಂಗಳೂರು:** ಯಾವುದೇ ರಂಗದಲ್ಲೇ ಆದರೂ ನಿರ್ಧಿಷ್ಟ ಗುರಿಯೊಂದಿಗೆ ಏಕಾಗ್ರತೆಯಿಂದ ಪರಿಶ್ರಮಪಟ್ಟರೆ ಸಾಧನೆ ಸಾಧ್ಯವಾಗುತ್ತದೆ. ಆ ಛಲವನ್ನು ಬೆಳೆಸಿಕೊಳ್ಳಿ ಎಂದು ರಾಜ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಟಿ. ಆರ್.ಪರಶುರಾಮನ್ ಅಭಿಪ್ರಾಯಪಟ್ಟರು. ಮೈಸೂರು ರಸ್ತೆಯ ಆರ್.ವಿ.ಎಂಜಿನಿಯರಿಂಗ್ ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ಹೊಸ ಸಂಶೋಧನೆ ಕೈಗೊಳ್ಳಬೇಕೆಂದರೆ ಕಠಿಣ ಪರಿಶ್ರಮ ಅಗತ್ಯವಾಗಿದೆ. ನಿರ್ಧಿಷ್ಟ ಗುರಿಯೊಂದಿಗೆ ಕ್ರಿಯಾಶೀಲತೆಯಿಂದ ಮುನ್ನಡೆದರೆ ಹೊಸದನ್ನು ಸಾಧಿಸಬಹುದು. ಆ ಛಲವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. 209 ವಿದ್ಯಾರ್ಥಿಗಳಿಗೆ ಎಂ.ಟೆಕ್ ಮತ್ತು 109 ವಿದ್ಯಾರ್ಥಿಗಳಿಗೆ ಎಂಸಿಎ ಪದವಿ ನೀಡಿ ಗೌರವಿಸಲಾಯಿತು. 14 ವಿಭಾಗಗಳ 28 ವಿದ್ಯಾರ್ಥಿಗಳಿಗೆ ಚಿನ್ನ ಮತ್ತು ಬೆಳ್ಳಿಯ ಪದಕ ಪ್ರದಾನ ಮಾಡಲಾಯಿತು. ಆರ್‌ಎಸ್‌ಎಸ್‌ಟಿ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್, ಸಹಾಯಕ ಕಾರ್ಯದರ್ಶಿ ನಿಖಿಲ್ ಮೂರ್ತಿ, ಪ್ರಾಂಶುಪಾಲ ಡಾ.ಸುಬ್ರಮಣ್ಯ, ಉಪ ಪ್ರಾಂಶುಪಾಲೆ ಡಾ.ಗೀತಾ ಉಪಸ್ಥಿತರಿದ್ದರು.